ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ7(8)ಆರ್.ಟಿ.ಇ/ಪ್ರ.ಪ್ರ.02/2019-20 ದಿನಾಂಕ:25.05.2019

**::ಸುತ್ತೋಲೆ::**

**ವಿಷಯ:**-2019-20 ನೇ ಸಾಲಿಗೆ ಆರ್‌ಟಿಇ ಕಾಯ್ದೆಯಡಿಯಲ್ಲಿ ಎರಡನೇ ಸುತ್ತಿನ ಸೀಟು ಹಂಚಿಕೆ ಮಾಡಿರುವ ಬಗ್ಗೆ .

**ಉಲ್ಲೇಖ:**-ಆರ್‌ಟಿಇ ಕಾಯ್ದೆಯಡಿ ಆನ್‌ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಎರಡನೇ ಸುತ್ತಿನ ಲಾಟರಿ ಪ್ರಕ್ರಿಯೆ ದಿನಾಂಕ:25.05.2019

@@@@@

2019-20 ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ದಿನಾಂಕ:25.05.2019 ರಂದು ಆನ್‌ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಎರಡನೇ ಸುತ್ತಿನ ಸೀಟು ಹಂಚಿಕೆ ಮಾಡಲಾಗಿದೆ. ಸೀಟು ಹಂಚಿಕೆ ಯಾದ ಪ್ರತಿ ಮಗುವಿನ ಪೋಷಕರ ಮೊಬೈಲ್ ಸಂಖ್ಯೆಗೆ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಎಸ್.ಎಂ.ಎಸ್ ಕಳುಹಿಸಲಾಗುವುದು.

ಆದ್ದರಿಂದ ಎರಡನೇ ಸುತ್ತಿನ ಲಾಟರಿ ಮೂಲಕ ಆಯ್ಕೆಯಾದ ಮಗುವಿನ ಪೋಷಕರು ಇಲಾಖಾ ವೆಬ್‌ಸೈಟ್ www.schooleducation.kar.nic.in ಗೆ ಭೇಟಿ ನೀಡಿ, ಅರ್ಜಿಯ ಸಂಖ್ಯೆಯನ್ನು ನಮೂದಿಸಿ, ಸೀಟು ಹಂಚಿಕೆಯಾದ ಪತ್ರದ ಪ್ರಿಂಟ್ ಪಡೆದುಕೊಂಡು, ಈಗಾಗಲೇ ಆರ್.ಟಿ.ಇ ಅರ್ಜಿಯೊಂದಿಗೆ ನೀಡಿದ ಮೂಲ ಆಧಾರ್ ಕಾರ್ಡ್‌ನೊಂದಿಗೆ ಆಯ್ಕೆಯಾದ ಶಾಲೆಯನ್ನು ಸಂಪರ್ಕಿಸಿ ಮಗುವನ್ನು ದಾಖಲಾತಿ ಮಾಡಿಸುವುದು. ದಾಖಲಾತಿಗೆ 30.05.2019 ಕೊನೆಯ ದಿನವಾಗಿರುತ್ತದೆ.

ಸೀಟು ಹಂಚಿಕೆಯಾಗುವ ಮೊದಲೇ ಪೋಷಕರು ಹಾಗೂ ಮಗುವಿನ ಎಲ್ಲಾ ದಾಖಲೆಗಳನ್ನು ಇಲಾಖೆಯ ಹಂತದಲ್ಲಿ ಸಂಪೂರ್ಣವಾಗಿ ಪರಿಶೀಲಿಸಿರುವುದರಿಂದ, ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯವರು ದಾಖಲೆಗಳನ್ನು ಮರುಪರಿಶೀಲನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಪ್ರವೇಶದ ಸಂದರ್ಭದಲ್ಲಿ ಪೋಷಕರು ನೀಡುವ ಆಧಾರ್ ಕಾರ್ಡ್‌ನ್ನು ಪೋಷಕರು ಹಾಗೂ ಮಗುವನ್ನು ಗುರುತಿಸಲು ಮಾತ್ರ ಪರಿಗಣಿಸಲು ಈ ಮೂಲಕ ಸೂಚಿಸಿದೆ. ಈ ವಿಚಾರವನ್ನು ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಗಮನಕ್ಕೆ ತರಲು ಹಾಗೂ ಸೂಕ್ತ ನಿರ್ದೇಶನವನ್ನು ನೀಡಲು ಈ ಮೂಲಕ ಸೂಚಿಸಲಾಗಿದೆ.

ಶಾಲಾ ಆಡಳಿತ ಮಂಡಳಿಯು ಆಯಾ ದಿನ ದಾಖಲಾದ ವಿದ್ಯಾರ್ಥಿಗಳ ವಿವರನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅದೇ ದಿನ ಅಪ್‌ಲೋಡ್ ಮಾಡುವುದು. ಶಾಲಾ ಹಂತದಲ್ಲಿ ದಾಖಲಾತಿ ಮಾಡಿಕೊಂಡು ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡದಿದ್ದಲ್ಲಿ ಆಯಾ ಶಾಲಾ ಆಡಳಿತ ಮಂಡಳಿಯವರೇ ಜವಾಬ್ದಾರರಾಗಿರುತ್ತಾರೆ. ದಾಖಲಾತಿ ಸಂಬಂಧ ಏನಾದರೂ ಅಡಚಣೆಯಾದಲ್ಲಿ ಇಲಾಖಾ ವೆಬ್‌ಸೈಟ್ www.rtektk@gmail.com ನ ಆರ್.ಟಿ.ಇ ವಿಭಾಗಕ್ಕೆ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ನಿರ್ದೇಶಕರು ಪ್ರಾಥಮಿಕ ಶಿಕ್ಷಣ

ರವರಿಗೆ ,

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ರಾಜ್ಯದ ಅಲ್ಪಸಂಖ್ಯಾತವಲ್ಲದ ಅನುದಾನಿತ ಹಾಗೂ ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ.
4) ಕಛೇರಿ ಪ್ರತಿ.